ದಿನಾಂಕ 30-01-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಬೆಂಗಳೂರಿನ ನ್ಯೂ ಲೈಫ್ ಆಸ್ಪತ್ರೆಯ ಮೆಡಿಕಲ್ ರೆಕಾರ್ಡ್ ಕೀಪರ್ ಆಗಿದ್ದು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

| | |
|---|---|
| ನಿಪಿ-15 | ಆಥರೈಜೇಷನ್ ಲೆಟರ್ |
| ನಿಪಿ-16 | ಎಂ.ಎಲ್.ಸಿ ರಿಜಿಸ್ಟರ್ ಎಕ್ಸ್ಟ್ರಾಕ್ಟ್ |
| ನಿಪಿ-17 | ಕೇಸ್ ಶೀಟ್ |

ಮೇಲ್ಕಂಡ ದಾಖಲೆಗಳನ್ನು ಕ್ರಮವಾಗಿ ನಿಪಿ-15 ರಿಂದ ನಿಪಿ-17 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಶ್ರೀ ಬಿ.ಸಿ.ವಿ., ವಕೀಲರಿಂದಃ-

ನಾನು ನ್ಯೂ ಲೈಫ್ ಆಸ್ಪತ್ರೆಯಲ್ಲಿ ರೆಕಾರ್ಡ್ ಕೀಪರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂದು ತೋರಿಸಲು ನೇಮಕಾತಿ ಆದೇಶ ಅಥವಾ ಗುರುತಿನ ಚೀಟಿ ಹಾಜರುಪಡಿಸಿಲ್ಲ. ನಿಪಿ-16 ಮತ್ತು ನಿಪಿ-17ರಲ್ಲಿ ನನ್ನ ಸಹಿ ಇಲ್ಲ. ಯಾವ ಯಾವ ಚಿಕಿತ್ಸೆಗೆ ಎಷ್ಟೆಷ್ಟು ಹಣ ಚಾರ್ಜ್ ಮಾಡಬೇಕೆಂದು ಸರ್ಕಾರದ ನೋಟಿಫಿಕೇಶನ್ ಇದೆ ಎಂದರೆ ಸರಿ. ಸದರಿ ನೋಟಿಫಿಕೇಶನನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ-16ರಲ್ಲಿ ಬಸ್ ಎಂದು ಬರೆದು, ಬ್ರಾಕೆಟ್‌ನಲ್ಲಿ ಕೆ.ಎಸ್.ಆರ್.ಟಿ.ಸಿ ಎಂದು ಬರೆದಿದೆ ಎಂದರೆ ಸರಿ. ನಿಪಿ-16ನ್ನು ನಾವು ಮತ್ತು ಅರ್ಜಿದಾರರು ಸೇರಿ ಕೇಸಿಗೋಸ್ಕರ ಸೃಷ್ಟಿಸಿದ್ದೇವೆ ಎಂದರೆ

ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.